ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

ಅ) ಹೌದು.

ಆ) ಆ) ನಿರುದ್ಯೋಗಿ ವಿದ್ಯಾವಂತರ ಹೆಸರುಗಳನ್ನು ನೋಂದಾಯಿಸುವುದು.

ಆ) ಸರ್ಕಾರಿ ಪಲಯ, ಖಾಸಗಿ ಪಲಯಗಳಲ್ಲಿ, ಅರೆಸರ್ಕಾರಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಲಯಗಳಲ್ಲಿ ಕಾರ್ಖಾನೆ ಉದ್ದಿಮೆ, ಸಂಸ್ಥೆ. ಮುಂತಾದುವುಗಳಲ್ಲಿ ಹುದ್ದೆಗಳ ವಿವರಗಳನ್ನು ಪಡೆದು ಅವುಗಳಿಗೆ ಅರ್ಹ ನೋಂದಾಯಿತರ ಹೆಸರುಗಳನ್ನು ಸೂಚಿಸುವುದು, ಇತ್ಯಾದಿ.

ಶ್ರೀ ಐ. ಬಿ. ಶಂಕರ್.—ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ನೋಂದಣಿ ಮಾಡಿಸಿರುವಂತಹ ನಿರುದ್ಯೋಗಿಗಳ ವಯಸ್ಸು ಮೀರಿ ಹೋಗುತ್ತಾ ಇದೆ. ನೀವು ಸೀನಿಯಾರಿಟಿ ಮಾಡುತ್ತಾ, ಕುಳಿತರೆ ಸರ್ಕಾರ ನಿಗದಿ ಮಾಡಿರುವಂತಹ ವಯೋಮಿತಿ ಮೀರಿ ಹೋಗುತ್ತದೆ, ಅಂತಹವರಿಗೆ ತಾವು ಪ್ರಾತಿನಿಧ್ಯವನ್ನು ಏಕೆ ಕೊಡಬಾರದು?

ಶ್ರೀ ಡಿ. ಮಂಜುನಾಥ್.—ಇದು ಏನಾಗಿದೆ ಎಂದರೆ, ಈಗ ಉದ್ಯೋಗ ವಿನಿಮಯ ಕೇಂದ್ರದಿಂದ ಬರೀ ಕ್ಲಾಸ್–೪ ಸರ್ವೆಂಟ್ಸ್‌ಗಳಿಗಾಗಿ ಕೇಳುತ್ತಾರೆ. ಜೊತೆಗೆ ನೇಮಕಾತಿ ಸಮಿತಿಗಳು ಬೇಕಾದಷ್ಟು ಆಗಿವೆ. ಆದರ ಜೊತೆಗೆ ಲೋಕ ಸೇವಾ ಆಯೋಗದವರು ಎ.ಬಿ.ಸಿ. ದರ್ಜೆಯ ನೇಮಕಾತಿಗಳನ್ನು ಮಾಡುತ್ತಾರೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದು ನಿಜ. ೭–೮ ವರ್ಷಗಳಾದರೂ ನೋಂದಣಿ ಮಾಡಿಸಿದಂತಹವರಿಗೆ ಇಂಟರ್‌ವ್ಯೂ ಬರುವುದಿಲ್ಲವೆಂದು ಹೇಳಿದ್ದಾರೆ. ಬರೀ ಕ್ಲಾಸ್–೪ಗೆ ಮಾತ್ರ ಇಲಾಖೆಯವರು ಕೇಳುತ್ತಿರುವುದರಿಂದ ಈ ರೀತಿಯಾಗಿರುವುದಕ್ಕೆ ಸಾಧ್ಯವಾಗಿದೆ.

ಶ್ರೀ ಐ. ಬಿ. ಶಂಕರ್.—ಹೆಚ್ಚು ವಯಸ್ಸು ಆದಂತಹವರಿಗೆ ಆದ್ಯತೆಯನ್ನು ಕೊಟ್ಟು ಅವರಿಗೆ ಇಂಟರ್‌ವ್ಯೂವನ್ನು ಕೊಡಿಸುವಂತಹ ಕೆಲಸವನ್ನು ತಾವು ಏಕೆ ಮಾಡಬಾರದು?

ಶ್ರೀ ಡಿ. ಮಂಜುನಾಥ್.—ಕ್ಲಾಸ್–೪ ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರವನ್ನೇ ಕೇಳ ಬೇಕೆಂದು ಕಡ್ಡಾಯ ಮಾಡುತ್ತೇವೆ. ಮತ್ತೆ ನೋಂದಣಿ ಮಾಡಿಸಿರುವವರಲ್ಲಿ ಸೀನಿಯಾರಿಟಿ ಆಧಾರದ ಮೇಲೆ ಇಂಟರ್‌ವ್ಯೂಗೆ ಕಳುಹಿಸುತ್ತಿದ್ದೇವೆ.

ರಾಜ್ಯದಲ್ಲಿರುವ ಆಟೋರಿಕ್ಷಾಗಳು

೫೭೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಸಾರಿಗೆ ಮತ್ತು ರಾಜ್ಯ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಎಷ್ಟು ಆಟೋರಿಕ್ಷಾಗಳು ಓಡುತ್ತಿವೆ, ಹಾಗೂ ಆ ಪೈಕಿ ಬೆಂಗಳೂರಿನಲ್ಲಿ ಓಡುತ್ತಿರುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಆ) ಮೀಟರ್ ಅಳವಡಿಸದೆ ಓಡಿಸಲ್ಪಡುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಇ) ಎಲ್ಲಾ ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ, ಹಾಗೂ ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಏನಾದರೂ ಕೊಟ್ಟಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮತ್ತು ಪಸತಿ ರಾಜ್ಯ ಸಚಿವರು).—

ಅ) ದಿನಾಂಕ ೩೧–೧೨–೮೫ ರಂದು.

ರಾಜ್ಯದಲ್ಲಿ	೨೬,೪೪೯
ಬೆಂಗಳೂರಿನಲ್ಲಿ	೧೦,೫೪೭

ಆ) ಇಲ್ಲ.

ಇ) ೧) ಆಟೋರಿಕ್ಷಾಗಳಿಗೆ ದರ ಸೂಚಿ ಮೀಟರನ್ನು ಅಳವಡಿಸುವುದು ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು ೧೯೬೩ರ ಪ್ರಕಾರ ಕಡ್ಡಾಯವಾಗಿರುತ್ತದೆ.

೨) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನ್ನ ಉತ್ತರದಲ್ಲಿ ತಪ್ಪು ಆಗ್ಗಿದೆ. ಅದನ್ನು ಸರಿಪಡಿಸಿಕೊಳ್ಳಬೇಕು. ಅದೇನೆಂದರೆ, ಅದರಲ್ಲಿ ರಾಜ್ಯದಲ್ಲಿರುವ ಆಟೋರಿಕ್ಷಾಗಳ ಸಂಖ್ಯೆ ೨೭,೬೫೮ ಎಂದು ಇದೆ. ಅದನ್ನು ೨೬,೪೪೯ ಎಂಬುದಾಗಿ ಸರಿಪಡಿಸಿಕೊಳ್ಳಬೇಕು. ಅದೇ ರೀತಿ ಬೆಂಗಳೂರು ನಗರದಲ್ಲಿರುವ ಆಟೋರಿಕ್ಷಾಗಳ ಸಂಖ್ಯೆ ೧೦,೨೮೮ ಎಂದು ಇದೆ. ಅದನ್ನು ೧೦,೫೯೭ ಎಂಬುದಾಗಿ ಸರಿಪಡಿಸಿಕೊಳ್ಳಬೇಕು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ನನ್ನ (ಅ) ಪ್ರಶ್ನೆಗೆ ಇಲ್ಲ ಅಂತ ಉತ್ತರ ಕೊಟ್ಟಿದ್ದಾರೆ. ಈ ಸದನವನ್ನು ತಪ್ಪು ದಾರಿಗೆ ಎಳೆಯುವ ಉತ್ತರ ಅದು.

ಅಧ್ಯಕ್ಷರು.—ಸದನವನ್ನು ತಪ್ಪು ದಾರಿಗೆ ಎಳೆಯುವ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಉತ್ತರ ತಪ್ಪು ಇದ್ದರೆ, ಅದನ್ನು ಕೇಳಿ.

ಶ್ರೀ ಆರ್. ಎನ್. ನಾಯಕ್.—ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀಟರ್ರೇ ಅಲ್ಲ. ಇದು ತಪ್ಪು ಉತ್ತರ ಅಲ್ಲವಾ?

ಶ್ರೀ ರಾಜವರ್ಧನ್.—ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಉತ್ತರ ಅಂತ ಅವರು ಹೇಗೆ ಹೇಳುತ್ತಾರೆ?

ಶ್ರೀ ಆರ್. ಎನ್. ನಾಯಕ್.—ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಎಷ್ಟೋ ಕಡೆ ಮಿಟರ್ನ್ನೇ ಅಳವಡಿಸಿಲ್ಲ. ಅವಳಡಿಸಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇದು ಸರಿಯಲ್ಲ ಎಂಬುದು ನನ್ನ ಭಾವನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸದಸ್ಯರು ಅವರ (ಅ) ಪ್ರಶ್ನೆಯಲ್ಲಿ ''ಮಿಟರ್ ಅಳವಡಿಸದೆ ಓಡಿಸಲ್ಪಡುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು ''ಎಂಬುದಾಗಿ ಕೇಳಿದ್ದಾರೆ. ಎಲ್ಲಾ ಆಟೋರಿಕ್ಷಾಗಳಿಗೂ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಮಿಟರ್ನ್ನು ಅಳವಡಿಸಿದ್ದೇವೆ. ಆದರೆ ಅವರು ಕೇಳುತ್ತಿರುವುದು ನಾನು ಅರ್ಥಮಾಡಿಕೊಂಡ ಹಾಗೆ, ಆಟೋರಿಕ್ಷಾದವರು ಮೀಟರ್ ಪ್ರಕಾರ ಚಾರ್ಜ್ ಮಾಡುತ್ತಿದ್ದಾರೆಯೇ? ಇದರ ಬಗ್ಗೆ ನಾನು ಹೇಳುವುದೇನೆಂದರೆ, ಅನೇಕ ಕಡೆಗಳಲ್ಲಿ ಆಟೋರಿಕ್ಷಾದವರು ಮಿಟರ್ನ್ನು ಚಾಲು ಮಾಡದೆ ದರವನ್ನು ಸಿಕ್ಕಾಪಟ್ಟೆ ಪ್ರಯಾಣಿಕರಿಂದ ಕೇಳಿ ಪಡೆಯುತ್ತಿದ್ದಾರೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗಿದೆ ಎಂಬುದನ್ನು ಒಪ್ಪುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅವರು ಏನು ಹೇಳಿದ್ದಾರೋ ಅದೂ ಸರಿಯಲ್ಲ. ಮೀಟರ್ನ್ನು ಚಾಲೂ ಮಾಡದೆ ದರವನ್ನು ಕೇಳುತ್ತಿದ್ದಾರೆ ಎಂಬುದು ನನ್ನ ಪ್ರಶ್ನೆಯಲ್ಲ. ಬೆಂಗಳೂರು ನಗರದಲ್ಲೇ ಮೀಟರ್ ಪ್ರಕಾರ ದರವನ್ನು ವಸೂಲು ಮಾಡುತ್ತಿಲ್ಲ. ಅದಕ್ಕಿಂತ ಹೆಚ್ಚು ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಒಹಳ ದೊಡ್ಡ ಪ್ರಾಬ್ಲಂ ಇದೆ. ಎಷ್ಟೋ ಕಡೆಗಳಲ್ಲಿ ಮೀಟರನ್ನೇ ಅಳವಡಿಸಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿಂತೂ ಮೀಟರ್ ದರವನ್ನೇ ನಿಗದಿ ಮಾಡಿಲ್ಲ. ಆದ್ದರಿಂದ ನೀವು ಹೇಳುವುದು ಸರಿಯಲ್ಲ ಅಂತ ಹೇಳಿದೆ. ಇದಕ್ಕೆ ತಾವು ಏನು ಮಾಡುತ್ತೀರಿ? ಬೆಂಗಳೂರು ನಗರದಲ್ಲೇ ಆಟೋರಿಕ್ಷಾ ಡ್ರೈವರ್ಗಳು ಸರ್ಕಾರದ ಮಾತನ್ನು ಕೇಳುತ್ತಿಲ್ಲ. ಮೀಟರ್ ಇಲ್ಲದೆ ಮೀಟರ್ ಇದೆ ಅಂತ ಹೇಳುತ್ತಿದ್ದಾರೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಆಟೋರಿಕ್ಷಾಗಳ ಡ್ರೈವರ್ಗಳು ಸರ್ಕಾರದ ಮಾತನ್ನೇ ಕೇಳುವುದಿಲ್ಲವೆಂದು ಹೇಳಿರುವುದು ಉಪಯೋಗವಿಲ್ಲದ ಮಾತು. ಜೋರಾಗಿ ಮಾತನಾಡುವುದರಿಂದ ಏನೂ ಪ್ರಯೋಜನ ಇಲ್ಲ ಮಾನ್ಯ ಸದಸ್ಯರಿಗೆ ಎಷ್ಟು ಸಿಟ್ಟು ಬರುತ್ತದೆಯೋ ಅಷ್ಟೇ ಸಿಟ್ಟು ನಮಗೂ ಬರುತ್ತದೆ. ಸರ್ಕಾರ ಹೇಳತಕ್ಕಂತಹ ವಿಷಯಗಳನ್ನು ಮೊದಲು ಕೇಳಬೇಕು. ಆದರ ಬಗ್ಗೆ ಭಿನ್ನಾಭಿಪ್ರಾಯ ಇದ್ದರೆ ಇಬ್ಬರೂ ಕುಳಿತುಕೊಂಡು ಸಮಸ್ಯೆಯನ್ನು ಬಗೆಹರಿಸೋಣ. ನಾನೇನು ಆಟೋರಿಕ್ಷಾಗಳ ಕಂಪನಿಯವರ ಪರವಾಗಿ ಇದ್ದೀನೇನು? ಇಲ್ಲ ಆಟೋರಿಕ್ಷಗಳ ಮಾಲೀಕರ ಪರವಾಗಿ ಇದ್ದೀನೇನು? ನಾನಂ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಅಧಿವೇಶನ ಮುಗಿದ ನಂತರ ಈ ಅಧಿವೇಶ ಪ್ರಾರಂಭವಾಗುವುದರೊಳಗಾಗಿ ೩ ಸಾರಿ ಪ್ರವಾಸ ಮಾಡಿದ್ದೇನೆ. ಆ ಸಮಯದಲ್ಲಿ ಸಂಬಂಧಪಟ್ಟ

ಜಿಲ್ಲಾ ಮಂತ್ರಿಗಳೂ ನನ್ನ ಜೊತೆಯಲ್ಲಿದ್ದರು. ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಕಾನಡೆಯವರು ನನ್ನ ಜೊತೆಯಲ್ಲಿದ್ದರು. ಆ ಸಂದರ್ಭದಲ್ಲಿ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದರೆ ಅದರ ಬಗ್ಗೆ ವಿಚಾರಣೆ ಮಾಡಿಸುತ್ತಿದ್ದೆ. ನನಗೆ ಬಂದಿರುವ ವರದಿ ಪ್ರಕಾರ, ಅಂಕಿ ಅಂಶಗಳ ಪ್ರಕಾರ ಮೀಟರ್ ಹಾಕಿದ್ದೇವೆ. ಆದರೆ ಮಾನ್ಯ ಸದಸ್ಯರು ಇಂತಹ ಕಡೆ ಮೀಟರ್‌ನ್ನು ಅಳವಡಿಸಿಲ್ಲವೆಂದು ನಿರ್ದಿಷ್ಟವಾದ ದೂರನ್ನು ಕೊಟ್ಟರೆ ಅದರ ಬಗ್ಗೆ ವಿಚಾರಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ನಮ್ಮ ಜಿಲ್ಲೆಯಲ್ಲೂ ಮೀಟರನ್ನು ಅಳವಡಿಸಿಲ್ಲ. ಮಂತ್ರಿಯಾದವರಿಗೆ ಸೌಜನ್ಯ ಇರಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಶ್ರೀಮಾನ್ ರಾಮಪ್ಪನವರ ಹತ್ತಿರ ನಾನು ಸೌಜನ್ಯ ಕಲಿಯಬೇಕು !

ಶ್ರೀ ಎಂ. ರಾಮಪ್ಪ.—ನಿಮಗಿಂತ ಹೆಚ್ಚಿನ ವಯಸ್ಸು ನನಗೆ ಆಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ವಯಸ್ಸು ಎಲ್ಲರಿಗೂ ಆಗುತ್ತದೆ. ಎಲ್ಲಿ ಮೀಟರ್‌ನ್ನು ನಿರ್ದಿಷ್ಟವಾಗಿ ಅಳವಡಿಸಿಲ್ಲವೆಂದು ಅವರು ದೂರನ್ನು ಕೊಟ್ಟರೆ ಖಂಡಿತವಾಗಿಯೂ ಅವರು ಮೀಟರನ್ನು ಅಳವಡಿಸುವ ಹಾಗೆ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಒಂದು ವಿಷಯವಾಗಿದ್ದರೆ ದೂರನ್ನು ಕೊಡಬಹುದಿತ್ತು. ಇದು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮೀಟರ್‌ನ್ನು ಅಳವಡಿಸಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲ. ಏಕೆಂದರೆ ಮೀಟರ್‌ನ್ನು ಅಳವಡಿಸದೆ ಇರುವುದರಿಂದ ಪ್ರಯಾಣಿಕರಿಗೆ ತೊಂದರೆ ಆಟೋರಿಕ್ಷಾವನ್ನು ಓಡಿಸುವಂತಹ ಚಾಲಕನಿಗೂ ತೊಂದರೆ. ಇದರಿಂದ ಲಾಭ ಆಗುತ್ತಿರುವಂತಹದ್ದು ಪೋಲೀಸ್ ಇಲಾಖೆಗೆ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಪ್ರಯಾಣಿಕರಿಗೆ ಲಾಭವಾಗಬೇಕು. ಇಲ್ಲವೇ ಆಟೋರಿಕ್ಷಾವನ್ನು ಓಡಿಸುವಂಥಹ ಡ್ರೈವರ್‌ಗಿಗಾದರೂ ಲಾಭವಾಗಬೇಕು. ಲಾಭವಾಗುತ್ತಿರುವುದು ಪೋಲೀಸ್ ಇಲಾಖೆಗೆ.

ಶ್ರೀ ಆರ್. ಎನ್. ನಾಯಕ್.—ನಿಮ್ಮ ಸರ್ಕಾದಲ್ಲಿ ಅದಾದರೂ ಆಗಲಿ. ಮೀಟರ್ ಇಲ್ಲವೆಂದು ದೂರುಗಳನ್ನು ಬೇಕಾದರೆ ಕೊಡಬಹುದು. ಆದರೆ ಅದರಿಂದ ಏನು ಪ್ರಯೋಜನ ? ಎಷ್ಟು ಆಟೋರಿಕ್ಷಾಗಳಿಗೆ ಮೀಟರ್ ಇಲ್ಲವೆಂದು ಹೇಳಿ. ರಾಜ್ಯದಲ್ಲಿ ಎಷ್ಟು ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಸಿಲ್ಲ ಎಂಬ ಬಗ್ಗೆ ಏನಾದರೂ ವಿಚಾರಣೆ ನಡೆಸಂತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ರಾಜ್ಯದಲ್ಲಿರತಕ್ಕ ೨೬೪೪ ಆಟೋರಿಕ್ಷಾಗಳಿಗೂ ಮೀಟರ್ ಇದೆ. ಅದರಲ್ಲೇನು ಸಂಶಯ ಇಲ್ಲ. ಬಳ್ಳಾರಿಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರತಕ್ಕ ಆಟೋಗಳಿಗೆ ಮೀಟರ್ ಇಲ್ಲವೆಂದು ಮಾನ್ಯ ರಾಮಪ್ಪನವರು ಹೇಳಿದ್ದಾರೆ. ಅದನ್ನು ನಾನು ವಿಚಾರಿಸುತ್ತೇನೆ ಆಟೋದವರು ಮೀಟರ್ ಪ್ರಕಾರ ಬಾಡಿಗೆ ವಸೂಲ್ಮಾಡದೆ ಇರುವುದರಿಂದ ಪ್ರಯಾಣಿಕರಿಗೆ ತೊಂದರೆ ಯಾಗುತ್ತದೆಂಬುದನ್ನು ನಾನೂ ಒಪ್ಪುತ್ತೇನೆ. ಡ್ರೈವರ್‌ಗಳು ಕರೆದ ಕಡೆಗೆ ಬರುವುದಿಲ್ಲವೆಂದು ದೂರು ಇದೆ. ಶಾಸಕರ ಭವನಕ್ಕೆ ಬನ್ನಿ ಎಂದರೆ ಬರುವುದಿಲ್ಲ. ಮೊನ್ನೆ ರಾತ್ರಿ ೮ ಗಂಟೆ ಸಮಯದಲ್ಲಿ ಕಾರು ಇರಲಿಲ್ಲ. ರಾಜಾಜಿನಗರಕ್ಕೆ ಹೋಗಬೇಕೆಂದು ಒಬ್ಬ ಆಟೋದವನನ್ನು ಕೇಳಿದಾಗ ಬರುವುದಿಲ್ಲವೆಂದು ಹೇಳಿದ. ಈ ಅನುಭವ ನನಗೂ ಆಗಿದೆ ಬಹಳಷ್ಟು ಜನ ಆಟೋ ಡ್ರೈವರ್‌ಗಳೂ ಅದರಲ್ಲೂ ಬೆಂಗಳೂರಿನಲ್ಲಿರತಕ್ಕವರು ರಾತ್ರಿ ೭-೮ ಗಂಟೆ ಆದಮೇಲೆ ನಾವು ಕರೆದ ಕಡೆಗೆ ಬರುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇದಕ್ಕೆ ಆ ಸರ್ಕಾರ ಈ ಸರ್ಕಾರ ಎಂಬ ಬಣ್ಣ ಹಚ್ಚುವುದು ಸರಿಯಲ್ಲ, ಇದನ್ನು ಸರಿ ಮಾಡಬೇಕು.

ಶ್ರೀ ಆರ್. ಎನ್. ನಾಯಕ್.—ಮಂತ್ರಿಗಳ ಉತ್ತರದಿಂದ ನನಗೆ ಅಸಮಾಧಾನವಾಗಿದೆ.

ಅಧ್ಯಕ್ಷರು.—ನಿಮಗೆ ಏಕೆ ಇಷ್ಟು ಸಿಟ್ಟು ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಿಂಧ್ಯ ಅವರು ತರುಣರಿದ್ದಾರೆ. ಅವರಲ್ಲಿ ಹೆಚ್ಚಿನ ಕೆಲಸವಾಗಬೇಕೆಂಬ ಕಳಕಳಿ ಇದೆ. ತಮಗೇ ಆಟೋದವರ ಅನುಭವವಾಗಿದೆ ಎಂದು ಹೇಳಿದ್ದಾರೆ. ಈ ಅನುಭವದ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಸೂಕ್ತ ಆಜ್ಞೆ ಕೊಟ್ಟು ಸಮರ್ಪಕವಾಗಿ ಕೆಲಸ ಮಾಡುವಂತೆ

ಮಾಡಬೇಕು. ಆಟೋ ಲೈಸೆನ್ಸ್ ಕೊಡುವಾಗ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಕೊಡುತ್ತೀರಿ. ಲೈಸೆನ್ಸ್ ಕೊಡುವಾಗ ಹಾಕುವ ಪರತ್ತುಗಳನ್ನು ಕಟ್ಟುನಿಟ್ಟಾಗಿ ಅಳವಡಿಸುವಂತೆ ಅಧಿಕಾರಿಗಳಿಗೆ ಆಜ್ಞೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಪಾಟೀಲರು ಕೂಡ ಮಂತ್ರಿಗಳಾಗಿದ್ದವರು. ೧೯೭೩ ರಿಂದಲೂ ಆಜ್ಞೆಗಳು ಇವೆ. ಈಗ ಹೊಸದಾಗಿ ಆಜ್ಞೆ ಹೊರಡಿಸತಕ್ಕ ಅಗತ್ಯವಿಲ್ಲ. ಈ ಸಮಸ್ಯೆ ಬೆಂಗಳೂರಿನಲ್ಲಿ ಮಾತ್ರವಲ್ಲ. ಹುಬ್ಬಳ್ಳಿ, ಬೆಳಗಾಂನಲ್ಲೂ ಕೂಡ ಇದೆ. ನಾನು ಆಟೋ ಯೂನಿಯನ್ ನವರೊಡನೆ ಮಾತನಾಡಿದ್ದೇನೆ. ನನ್ನ ಮುಂದೆ ಮಾಡುತ್ತೇವೆಂದು ಹೇಳುತ್ತಾರೆ, ಆದರೆ ಮಾಡುವುದಿಲ್ಲ. ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರುಗಳು ಎಲ್ಲ ಆಟೋಗಳನ್ನು ಚೆಕ್ ಮಾಡಬೇಕೆಂದರೂ ಕಷ್ಟ.

ಶ್ರೀ ಕೆ. ಹೆಚ್. ಪಾಟೀಲ್.—ಶಾಸಕರಿಗೆ ಆ ಅಧಿಕಾರ ಕೊಡಿ, ಯಾರು ತಪ್ಪು ಮಾಡುತ್ತಾರೆ ಅವರ ಬಗ್ಗೆ ತಕ್ಷಣ ದೂರು ಕೊಡುವಂತೆ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ಪೆಸಿಫಿಕ್ ಆಗಿ ಎಲ್ಲಿ ದೂರು ಬರುತ್ತದೆ ಅಂಥ ಆಟೋಗಳ ಲೈಸೆನ್ಸ್ ಅನ್ನು ರದ್ದು ಮಾಡುತ್ತೇವೆ. ಯಾರೇ ಆಗಲಿ ಸ್ಪೆಸಿಫಿಕ್ ಆಗಿ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ, ಆದಷ್ಟು ಇರತಕ್ಕ ಕಾನೂನುಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ದಿಸೆಯಲ್ಲಿ ಸದಸ್ಯರು ಸಹಕಾರ ಕೊಡಬೇಕು.

ಕೌಟುಂಬಿಕ ನ್ಯಾಯಾಲಯವನ್ನು ಸ್ಥಾಪನೆ ಮಾಡುವ ಬಗ್ಗೆ.

೫೦೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕೌಟುಂಬಿಕ ವಿವಾದಗಳನ್ನು ಬಗೆಹರಿಸಲು ರಾಜ್ಯದಲ್ಲಿ ಕೌಟುಂಬಿಕ ನ್ಯಾಯಾಲಯ ಸ್ಥಾಪನೆ ಬಗ್ಗೆ ಸರಕಾರದವರು ಆಲೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಆರಂಭಿಸಲಾಗುವುದು ?

ಇ) ಈ ಬಗ್ಗೆ ಕೇಂದ್ರ ಸರಕಾರದವರು ಸೂಚನೆಗಳನ್ನೇನಾದರೂ ರಾಜ್ಯ ಸರಕಾರದವರಿಗೆ ನೀಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಆದಷ್ಟು ಬೇಗ.

ಇ) ಹೌದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನ್ನ (ಅ) ಪ್ರಶ್ನೆಗೆ ಹೌದು ಎಂದು ಹೇಳಿದ್ದೀರಿ. ಸಂತೋಷ. ಆ ನ್ಯಾಯಾಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುತ್ತೀರಾ ಅಥವಾ ಪ್ರತಿ ಜಿಲ್ಲೆಗ ಒಂದೊಂದು ನ್ಯಾಯಾಲಯಗಳನ್ನು ಸ್ಥಾಪಿಸಿ ಅಲ್ಲೆಲ್ಲಾ ಮಂಹಿಳಾ ನ್ಯಾಯಾಧೀಶರನ್ನು ನೇಮಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರುವ ಕಾನೂನು ಪ್ರಕಾರ ಒಂದು ಮಿಲಿಯನ್‌ಗೂ ಜಾಸ್ತಿ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ನ್ಯಾಯಾಲಯವನ್ನು ಸ್ಥಾಪಿಸಬಹುದು. ಆದ್ದರಿಂದ ಬೆಂಗಳೂರಿನಲ್ಲಿ ಕೌಟುಂಬಿಕ ನ್ಯಾಯಾಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆ. ಕಾನೂನು ಅಡಿಯಲ್ಲಿ ರೂಲ್ಸ್ ಮಾಡಬೇಕಾಗಿದೆ. ಕರಡು ರೂಲ್ಸ್ ಮಾಡಿ ಹೈಕೋರ್ಟಿನವರ ಜೊತೆಯಲ್ಲಿ ಕನ್‌ಸಲ್ಟ್ ಮಾಡಬೇಕಾಗಿದೆ. ಅದನ್ನು ತಯಾರಿಸಿ ಹೈಕೋರ್ಟಿಗೆ ಕಳುಹಿಸಿದ್ದೇವೆ. ಅವರ ಒಪ್ಪಿಗೆಯ ನಂತರ ಮುಂದಿನ ಕ್ರಮ ತೆಗೆದುಕೊಂಡು ಬೇಗ ಬೆಂಗಳೂರಿನಲ್ಲಿ ಕೌಟುಂಬಿಕ ಕೋರ್ಟನ್ನು ಸ್ಥಾಪಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ.